(ಸಾಕ್ಷಿಗೆ ದಿನಾಂಕ: 07.02.2026 ರಂದು ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲುಃ ಶ್ರೀಮತಿ ಜೆ.ಎಲ್., ವಾದಿ ಪರ ವಕೀಲರಿಂದಃ**

ವಾದಿ ನನ್ನ ದೊಡ್ಡಪ್ಪನ ಮಗಳಾಗಿರುತ್ತಾರೆ. ನಾನು ಮೋದೂರಿನ ನಿವಾಸಿ ಎಂದರೆ ಸರಿ. ದಾವಾ ಸ್ವತ್ತುಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ದಾವಾ ಸ್ವತ್ತುಗಳು ಲಕ್ಕಶೆಟ್ಟಿ ಮತ್ತು ಮರಿಶೆಟ್ಟಿರವರಿಗೆ ಪಿತ್ರಾರ್ಜಿತವಾಗಿ ಬಂದಿರುತ್ತವೆ ಎಂದರೆ ನನಗೆ ಗೊತ್ತಿರುವುದಿಲ್ಲ. ಲಕ್ಕಶೆಟ್ಟಿ ಬದುಕಿರುವಾಗಲೇ ಚನ್ನಮ್ಮನವರ ಮದುವೆಯಾಗಿರುತ್ತದೆ ಎಂದರೆ ಸರಿ. ಚನ್ನಮ್ಮನವರು ಮದುವೆಯಾದ ನಂತರ ತನ್ನ ಗಂಡನ ಮನೆಯಾದ ಮಲ್ಲೇನಹಳ್ಳಿಯಲ್ಲಿ ವಾಸವಾಗಿದ್ದರು ಎಂದರೆ ಸರಿ. ಸಾಕ್ಷಿಯು ಸ್ವತಹ ಮುಂದುವರೆದು, ಚನ್ನಮ್ಮರವರ ತಂದೆ ಮೃತಪಟ್ಟ ನಂತರ ಮೋದೂರಿನಲ್ಲೇ ವಾಸವಾಗಿರುತ್ತಾರೆ ಎಂದು ನುಡಿಯುತ್ತಾರೆ. ಲಕ್ಕಶೆಟ್ಟಿ ಮೃತಪಟ್ಟ ನಂತರವೇ ವಾದಿ ಮದುವೆಯಾಗಿರುತ್ತಾರೆ ಎಂದರೆ ಸರಿ. ಲಕ್ಕಶೆಟ್ಟಿ ಮೃತಪಡುವವರೆಗೂ ವಾದಿಯೇ ಸದರಿಯವರ ಯೋಗಕ್ಷೇಮವನ್ನು ನೋಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ಲಕ್ಕಶೆಟ್ಟಿರವರಿಗೆ ವಯಸ್ಸಾಗಿದ್ದರಿಂದ ಹಾಗೂ ಚನ್ನಮ್ಮರವರಿಗೆ ಮದುವೆಯಾಗಿದ್ದರಿಂದ ವಾದಿಯೇ ಮನೆಯ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಲಕ್ಕಶೆಟ್ಟಿರವರು ಮೃತಪಟ್ಟ ನಂತರ ಚನ್ನಮ್ಮರವರು ಅವರ ಅಂತ್ಯಕ್ರಿಯೆಗೆ ಬಂದಿರುವುದಿಲ್ಲ ಹಾಗೂ ಲಕ್ಕಶೆಟ್ಟಿರವರ ಅಂತ್ಯಕ್ರಿಯೆಯನ್ನು ವಾದಿ ಒಬ್ಬರೇ ನೆರವೇರಿಸಿರುತ್ತಾರೆ ಎಂದರೆ ಸರಿಯಲ್ಲ. ಮೃತ ಚನ್ನಮ್ಮರವರು ಲಕ್ಕಶೆಟ್ಟಿರವರ ಯೋಗಕ್ಷೇಮವನ್ನು ಎಂದೂ ನೋಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. 1952ನೇ ಸಾಲಿನಲ್ಲಿ ಚನ್ನಮ್ಮ ಮತ್ತು ಅವರ ಗಂಡ ಅನಾರೋಗ್ಯದಿಂದ ಬಳಲುತ್ತಿದ್ದ ಲಕ್ಕಶೆಟ್ಟಿರವರನ್ನು ತಮ್ಮ ಊರಾದ ಮಲ್ಲೇನಹಳ್ಳಿಗೆ ಕರೆದುಕೊಂಡು ಹೋಗಿ ಮಲ್ಲೇನಹಳ್ಳಿಯ ಆಸ್ಪತ್ರೆಗೆ ಸದರಿಯವರನ್ನು ಸೇರಿಸುತ್ತೇವೆ ಎಂದು ಹೇಳಿ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಆ ರೀತಿ ಲಕ್ಕಶೆಟ್ಟಿರವರನ್ನು ಮಲ್ಲೇನಹಳ್ಳಿಗೆ ಕರೆದುಕೊಂಡು ಹೋಗಿ ಆಸ್ಪತ್ರೆಗೆ ಸೇರಿಸದೇ ಯಾರಿಗೂ ತಿಳಿಯದಂತೆ ಲಕ್ಕಶೆಟ್ಟಿರವರಿಂದ ದಾನಪತ್ರವನ್ನು ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. 1952ರಲ್ಲಿ ಸದರಿ ದಾನಪತ್ರವಾಗುವ ಕಾಲಕ್ಕೆ ವಾದಿ ಲಕ್ಕಶೆಟ್ಟಿರವರ ಜೊತೆಯೇ ಮೋದೂರಿನಲ್ಲಿ ಇದ್ದರು ಎಂದರೆ ಸರಿ. ಸದರಿ ದಾನಪತ್ರವನ್ನು ಮಾಡುವ ಸಮಯದಲ್ಲಿ ನಾನು ಸ್ಥಳದಲ್ಲಿ ಇರಲಿಲ್ಲ. ನಾನು ಸ್ಥಳದಲ್ಲಿ ಇಲ್ಲದ ಕಾರಣ 1952ರ ದಾನಪತ್ರದ ಕುರಿತು ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ.

ವಾದಿ ಗಂಡನ ಹೆಸರು ಮರಿಶೆಟ್ಟಿ ಎಂದರೆ ಸರಿ. ವಾದಿಯ ಮದುವೆ ಖರ್ಚನ್ನು ಸದರಿಯವರ

ಗಂಡ ಮರಿಶೆಟ್ಟಿರವರೇ ವಹಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ವಾದಿ ತಾಯಿ ಲಕ್ಷ್ಮಮ್ಮ ಮೃತಪಟ್ಟಾಗಲೂ ಚನ್ನಮ್ಮ ಮತ್ತು ಅವರ ಗಂಡ ಅಂತ್ಯಕ್ರಿಯೆಗೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಚನ್ನಮ್ಮ ಬೇರೆ ಊರಿನಲ್ಲಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಹ ಮುಂದುವರೆದು ಮೋದೂರಿನಲ್ಲಿಯೇ ಇದ್ದರು ಎಂದು ನುಡಿಯುತ್ತಾರೆ. ಲಕ್ಷ್ಮಮ್ಮರವರ ಅಂತ್ಯಕ್ರಿಯೆಯ ಎಲ್ಲಾ ಖರ್ಚುಗಳನ್ನು ವಾದಿ ಮತ್ತು ಅವರ ಗಂಡನೇ ನಿರ್ವಹಿಸಿರುತ್ತಾರೆ ಎಂದರೆ ಸರಿಯಲ್ಲ. ಲಕ್ಷ್ಮಮ್ಮ ಮೃತಪಟ್ಟ ನಂತರವಷ್ಟೇ ಚನ್ನಮ್ಮ ಮತ್ತು ಅವರ ಗಂಡ ಮೋದೂರಿಗೆ ಬಂದು ನೆಲೆಸಿರುತ್ತಾರೆ ಎಂದರೆ ಸರಿಯಲ್ಲ. ಚನ್ನಮ್ಮರವರು ಯಾವತ್ತೂ ಲಕ್ಕಶೆಟ್ಟಿರವರನ್ನು ನೋಡಿಕೊಂಡಿರುವುದಿಲ್ಲ ಹಾಗೂ ಕುಟುಂಬದ ಯಾವುದೇ ಖರ್ಚು-ವೆಚ್ಚಗಳನ್ನು ನಿರ್ವಹಿಸಿರುವುದಿಲ್ಲ ಎಂದರೆ ಸರಿಯಲ್ಲ. ಲಕ್ಕಶೆಟ್ಟಿರವರು ತಮ್ಮ ಜೀವಿತಾವಧಿಯಲ್ಲಿ ಯಾವುದೇ ಸ್ವತ್ತನ್ನು ಸಂಪಾದಿಸಿರುವುದಿಲ್ಲ ಎಂದರೆ ಸರಿ. 1ನೇ ಪ್ರತಿವಾದಿಗೆ ದಾನಪತ್ರ ಬರೆದುಕೊಡಲು ಲಕ್ಕಶೆಟ್ಟಿರವರಿಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ದಾನವಾಗಿ ಪಡೆದ ಸ್ವತ್ತನ್ನು 1ನೇ ಪ್ರತಿವಾದಿ ಮನೆಯಲ್ಲಿ ಅವಶ್ಯಕತೆ ಇರುತ್ತದೆ ಎಂದು ತಪ್ಪು ನಿರೂಪಣೆ ಮಾಡಿ 2 ಮತ್ತು 3ನೇ ಪ್ರತಿವಾದಿಯರಿಗೆ ಕ್ರಯ ಮಾಡಿರುತ್ತಾರೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಸ್ವಂತಕ್ಕಾಗಿ ಸ್ವತ್ತನ್ನು ಕ್ರಯ ಮಾಡಿದ್ದು ಕುಟುಂಬದ ನಿರ್ವಹಣೆಗಾಗಿ ಕ್ರಯ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದಾನ ಪತ್ರದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ 1ನೇ ಪ್ರತಿವಾದಿಯ ಮಕ್ಕಳ ಸೂಚನೆಯಂತೆ ಈ ಕುರಿತು ತಿಳಿದಿದೆ ಎಂದು ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವೆ ಕುರಿತು ಏನೂ ಮಾಹಿತಿ ಇಲ್ಲದಿದ್ದರೂ ಸಹ ಪ್ರತಿವಾದಿಯರು ನನ್ನ ಸಂಬಂಧಿಕರಾದ ಕಾರಣ ಸದರಿಯವರಿಗೆ ಸಹಾಯ ಮಾಡಲು ನ್ಯಾಯಾಲಯದಲ್ಲಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಇದೆ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,
ಕುಣಿಗಲ್.